# ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 16–06–2015ರ ನಡವಳಿಗಳು

## ವಿಷಯದ ಸಂಖ್ಯೆ : 88 / 2015–16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿನಾಯಿ ಕಡಿತಕ್ಕೊಳಗಾದ ಸಾರ್ವಜನಿಕರಿಗೆ ಪರಿಹಾರ ನೀಡುವ ಬಗ್ಗೆ ಯೋಜನೆಯನ್ನು ಜಾರಿಗೊಳಿಸುವ ಕುರಿತು.

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:06–07–2010 ರಂದು ಯಲಹಂಕ ಉಪನಗರದಲ್ಲಿ 4 ವರ್ಷದ ಮಗುವಾದ ಮಾ: ಜಿಷ್ಣು.ಜಿ. ಬಿನ್ ಆರ್. ಗುರುರಾಜ, ಸಂಖ್ಯೆ:276, ಎಸ್ಎಂ 14–ಬಿ, 18ನೇ ವಿಭಾಗ, 5ನೇ ಹಂತ, ಯಲಹಂಕ ನ್ಯೂಟೌನ್, ಬೆಂಗಳೂರು–560106 ಇವರಿಗೆ ಬೀದಿನಾಯಿ ಕಡಿತಕ್ಕೊಳಗಾಗಿದ್ದು, ಯಲಹಂಕ ನ್ಯೂಟೌನ್‌ನಲ್ಲಿರುವ ನೇಹಪ್ರಕಾಶ್ ಆಸ್ಪತ್ರೆಯಲ್ಲಿ ಸದರಿ ಮಗುವಿನ ಚಿಕಿತ್ಸೆ ವೆಚ್ಚ ರೂ.26,500/–ಗಳನ್ನು ಪಾಲಿಕೆಯ ವತಿಯಿಂದ ಭರಿಸಲಾಗಿರುತ್ತದೆ. ಸದರಿ ಮಗುವಿನ ಪೋಷಕರು, ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:37197/2011ರಲ್ಲಿ ದಾವೆ ಹೂಡಿದ್ದು, ದಿನಾಂಕ:07.12.2012ರಲ್ಲಿ ತೀರ್ಪು ಜಾರಿ ಯಾಗಿರುತ್ತದೆ. ಸದರಿ ತೀರ್ಪಿನ ಕಂಡಿಕೆ–55 ಈ ಕೆಳಗಿನಂತಿದೆ:

> "55 **The Petitioner in W.P.No: 37197/2011 is at liberty to seek enhancement of compensation by making a representation to the Bruhath Bengaluru Mahanagara Palike or by availing of any other remedy in accordance with Law"** ಎಂದಿದೆ.

ಸದರಿ ತೀರ್ಪಿನ ಕಂಡಿಕೆ 54(9)ರಲ್ಲಿ **"The BBMP to frame Guidelines for the grant of compensation to the victims of attacks by the stray dogs"** ಎಂದಿದೆ.

ಈ ಕುರಿತು ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಂದ ಗಾಯಗೊಂಡ ಸಾರ್ವಜನಿಕರಿಗೆ ಪರಿಹಾರ ನೀಡುವ ಬಗ್ಗೆ ಮಾರ್ಗಸೂಚಿಯನ್ನು ತಯಾರಿಸಲು ಒಂದು ಸಮಿತಿ ರಚಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ:202:ಎಂಎನ್‌ವೈ: 2013, ಬೆಂಗಳೂರು ದಿ:26.06.2013 ರಲ್ಲಿ ಈ ಕೆಳಕಂಡ ಸಮಿತಿಯನ್ನು ರಚಿಸಿ ಆದೇಶಿಸಲಾಗಿರುತ್ತದೆ:

| | |
|---|---|
| 1. ಆಯುಕ್ತರು ಬಿಬಿಎಂಪಿ | ಅಧ್ಯಕ್ಷರು |
| 2. ವಿಶೇಷ ಆಯುಕ್ತರು (ಯೋಜನೆ) ಬಿಬಿಎಂಪಿ | ಸದಸ್ಯರು |
| 3. ಅಪರ / ಜಂಟಿ ಆಯುಕ್ತರು (ಆರೋಗ್ಯ) ಬಿಬಿಎಂಪಿ | ಸದಸ್ಯರು |
| 4. ಜಂಟಿ ನಿರ್ದೇಶಕರು (ಪಶುಪಾಲನೆ) ಬಿಬಿಎಂಪಿ | ಸದಸ್ಯರು |
| 5. ಮುಖ್ಯ ಲೆಕ್ಕಾಧಿಕಾರಿಗಳು, ಬಿಬಿಎಂಪಿ | ಸದಸ್ಯರು |
| 6. ಮುಖ್ಯ ಆರೋಗ್ಯಾಧಿಕಾರಿಗಳು, ಬಿಬಿಎಂಪಿ | ಸದಸ್ಯಕಾರ್ಯದರ್ಶಿಗಳು |

ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:17.07.2013 ಹಾಗೂ ದಿನಾಂಕ:05.02.2014ಗಳಂದು ನಡೆದ ಸಭೆಯಲ್ಲಿ ಬೀದಿನಾಯಿ ಕಡಿತಕ್ಕೊಳಗಾದ ಸಾರ್ವಜನಿಕರಿಗೆ ಪರಿಹಾರ ನೀಡುವ ಬಗ್ಗೆ ರೂಪುರೇಷೆ ಗಳನ್ನು ರಚಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಿ ಆದೇಶಿಸಲಾಗಿರುತ್ತದೆ:

1. ವಿಶೇಷ ಆಯುಕ್ತರು (ಯೋಜನೆ) ಬಿಬಿಎಂಪಿ ಅಧ್ಯಕ್ಷರು
2. ಕಾನೂನು ಕೋಶದ ಮುಖ್ಯಸ್ಥರು ಬಿಬಿಎಂಪಿ ಸದಸ್ಯರು
3. ಜಂಟಿ ಆಯುಕ್ತರು (ಆರೋಗ್ಯ) ಬಿಬಿಎಂಪಿ ಸದಸ್ಯರು
4. ಮುಖ್ಯ ಲೆಕ್ಕಾಧಿಕಾರಿಗಳು, ಬಿಬಿಎಂಪಿ ಸದಸ್ಯರು
5. ಮುಖ್ಯ ಆರೋಗ್ಯಾಧಿಕಾರಿಗಳು, ಬಿಬಿಎಂಪಿ ಸದಸ್ಯರು
6. ಜಂಟಿ ನಿರ್ದೇಶಕರು (ಪಶುಪಾಲನೆ) ಬಿಬಿಎಂಪಿ ಸದಸ್ಯ ಕಾರ್ಯದರ್ಶಿಗಳು

ವಿಶೇಷ ಆಯುಕ್ತರು (ಯೋಜನೆ) ಇವರ ಅಧ್ಯಕ್ಷತೆಯಲ್ಲಿ ಹಲವು ಸುತ್ತಿನ ಸಭೆಗಳು ನಡೆದಿರುತ್ತವೆ. ಈ ನಡುವೆ ಕರ್ನಾಟಕ ಉಚ್ಚನ್ಯಾಯಾಲಯದಿಂದ ರಿಟ್ ಅರ್ಜಿ ಸಂಖ್ಯೆ:37197/2011 ರಲ್ಲಿ ದಿನಾಂಕ:07.12.2012 ರ ನ್ಯಾಯಾಲಯದ ಆದೇಶದಂತೆ, ಬೀದಿನಾಯಿ ಕಡಿತಕ್ಕೊಳಗಾದ ಸಾರ್ವಜನಿಕರಿಗೆ ಪರಿಹಾರ ಘೋಷಿಸದ ಬಗ್ಗೆ ಮಾಸ್ಟರ್ ಜಿಷ್ಣು, ಇವರ ಪೋಷಕರಿಂದ ದಾವೆ 1189-1190/2014 ರಂತೆ ನ್ಯಾಯಾಲಯದ ನಿಂದನೆ ಕೇಸು ದಾಖಲಿಸಿದ್ದುದರಿಂದ, ಮಾನ್ಯ ಉಚ್ಚ ನ್ಯಾಯಾಲಯವು ಬೀದಿನಾಯಿ ಕಡಿತಕ್ಕೊಳಗಾದ ಸಾರ್ವಜನಿಕರಿಗೆ ಪರಿಹಾರ ಘೋಷಿಸುವ ಕ್ರಮ ಕೈಗೊಳ್ಳದಿರುವ ಬಗ್ಗೆ ದಿನಾಂಕ:05.11.2014ರ ನ್ಯಾಯಾಲಯ ನಿಂದನೆ ಕುರಿತಂತೆ ನ್ಯಾಯಾಲಯದಿಂದ ಪಾಲಿಕೆಯ ಆಯುಕ್ತರವರಿಗೆ, ಜಂಟಿ ನಿರ್ದೇಶಕರು(ಪಶುಪಾಲನೆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ನೋಟೀಸನ್ನು ಜಾರಿ ಮಾಡಲಾಗಿತ್ತು.

ಈ ಹಿನ್ನಲೆಯಲ್ಲಿ, ಸದಸ್ಯ ಸಮಿತಿಯು ಮಾರ್ಗಸೂಚಿಯನ್ನು ರೂಪಿಸಲು ಮೆ: ಇಂಡಿಯನ್ ಲಾ ಪ್ರ್ಯಾಕ್ಟೀಸ್ ಸಂಸ್ಥೆಯವರಿಗೆ ವಹಿಸಿದ್ದು, ಶ್ರೀ ಪ್ರಶಾಂತ, ವಕೀಲರು, ಇವರು ತಯಾರಿಸಿ ಸಲ್ಲಿಸಿದ್ದ ಗೈಡ್ ಲೈನ್ಸ್ (ಮಾರ್ಗಸೂಚಿ) ಕಡತವನ್ನು ಪರಿಷ್ಕರಿಸಲು ಕಾನೂನು ಕೋಶದ ಮುಖ್ಯಸ್ಥರಾದ ಶ್ರೀ.ಕೆ.ಡಿ.ದೇಶಪಾಂಡೆಯವರನ್ನೊಳಗೊಂಡು ಶ್ರೀ ಬಿ.ಕೆ.ರಮೇಶ್, ಡೆಪ್ಯೂಟಿ ಲಾ ಆಫಿಸರ್, ಶ್ರೀ ಮುನಿರಾಜ, ಸಹಾಯಕ ಲಾ ಆಫಿಸರ್. ಶ್ರೀ ಎಸ್.ಹಲಗೇರಿ, ಸಹಾಯಕ ಲಾ ಆಫಿಸರನ್ನೊಳಗೊಂಡ ಸಮಿತಿಯನ್ನು ಕಾನೂನು ಕೋಶದ ಮುಖ್ಯಸ್ಥರು ರಚಿಸಿರುತ್ತಾರೆ. ಪರಿಷ್ಕರಿಸಲಾದ ಸದರಿ ಮಾರ್ಗಸೂಚಿಗಳನ್ನು ಅಂತಿಮಗೊಳಿಸಲು ಮಾನ್ಯ ಆಯುಕ್ತರವರಿಂದ ರಚಿಸಲಾದ ಸಮಿತಿಯ ಸದಸ್ಯರುಗಳು, ಪರಸ್ಪರ ವಿಚಾರ ವಿನಿಮಯಗಳನ್ನು ಮಾಡುವುದಲ್ಲದೆ ಈ ಕೆಳಗೆ ಕಾಣಿಸಿದ ದಿನಾಂಕಗಳಂದು ದಿನಾಂಕ:15.04.2015, 17.04.2015, 20.04.2015, 22.04.2015, 27.04.2015, 28.04.2015, 30.04.2015, 02.05.2015, 12.5.2015, 21.05.2015, 02.06.2015, 06.06.2015ಗಳಂದು ಸಭೆ ನಡೆಸಿ ಪೂರ್ಣ ಪ್ರಮಾಣದ ಮಾರ್ಗಸೂಚಿಯನ್ನು ರಚಿಸಿತು. ರಚಿಸಲಾದ ಮಾರ್ಗಸೂಚಿಯನ್ನು ದಿನಾಂಕ:10.06.2015 ರಂದು ಸಮಿತಿಯು ಸಭೆ ನಡೆಸಿ ಅಂತಿಮಗೊಳಿಸಿತು.

ದೇಶದಲ್ಲೇ ಪ್ರಪ್ರಥಮ ಬಾರಿಗೆ ಬೀದಿನಾಯಿ ಕಡಿತಕ್ಕೊಳಗಾದ ಸಾರ್ವಜನಿಕರಿಗೆ ಪರಿಹಾರ ನೀಡುವ ಬಗ್ಗೆ ಮಾರ್ಗಸೂಚಿಯನ್ನು ರಚಿಸಲಾಗಿದ್ದು, ಸದರಿ ಮಾರ್ಗಸೂಚಿಗಳು ಬಹಳ ಉತ್ತಮವಾಗಿದ್ದು, ಅನುಕರಣೀಯವಾಗಿರುತ್ತದೆ ಎಂದು ಸಮಿತಿಯು ಅಭಿಪ್ರಾಯಿಸಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿನಾಯಿ ಕಡಿತಕ್ಕೊಳಗಾದ ಸಾರ್ವಜನಿಕರಿಗೆ ಪರಿಹಾರ ನೀಡುವ ಬಗ್ಗೆ ಅಂತಿಮಗೊಳಿಸಲಾಗಿರುವ ಮಾರ್ಗಸೂಚಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12.06.2015ರ ಟಿಪ್ಪಣಿ.

**<u>ತೀರ್ಮಾನ: "ತಿದ್ದಿದಂತೆ ಅನುಮೋದಿಸಿದೆ".</u>**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು